# ನೀರಿನೊಳಗಿನ ಮಂಜು

ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ



## ಆಟ-ಮಾಟದ ನೆನಪುಗಳ ಕದ ತೆರೆದ ಕತೆ

'ಸರಿ ಹಾಗೇ ಮಾಡಿ' ಎಂದ ಜಯಂತಿ, 'ನಾನಿನ್ನು ಬರ್ತೇನೆ' ಎಂದು ಕಾರು ಹತ್ತಿ ಕಾಲೇಜಿಗೆ ನಡೆದಳು. ರಾಯರು ಒಂದೊಂದೇ ಕತೆಯನ್ನು ಓದುತ್ತಾ ಹೋದ ಹಾಗೆ, ಇವು ಕಾಲೇಜು ಮಕ್ಕಳು ಬರೆದ ಕತೆಗಳಾದರೂ 'ಪರವಾಗಿಲ್ಲ' ಎಂದು ಅವರಿಗೆ ಅನಿಸಿತು. ನಮ್ಮ ಮಕ್ಕಳಿಗೆ ಒಳ್ಳೇ ಸಂವೇದನೆ ಇದೆ ಎಂದುಕೊಂಡ ರಾಯರು ಈ ನಡುವೆ ಜಯಂತಿ ಮಾಡಿ ಇಟ್ಟಿದ್ದ ಟೀ ಕುಡಿದು ಹಾಸಿಗೆಯಲ್ಲಿ ಉದ್ದಕ್ಕೂ ಕಾಲುಚಾಚಿ ಮಲಗಿದರು. ಸ್ವಲ್ಪ ಹೊತ್ತಿನ ಮೇಲೆ ಓದಲು ಹತ್ತಿದಾಗ ಸಣ್ಣ ಮಂಪರು ಕಾಣತೊಡಗಿದಂತಾದ್ದರಿಂದ ಎದ್ದು ಕುಳಿತು ಚಾವಡಿಗೆ ಬಂದು ಈಸೀಚೇರಿನಲ್ಲಿ ಕುಳಿತು ಕತೆಗಳ ಒಳಗೆ ಮತ್ತೆ ಇಳಿದರು.

ಜಯಂತಿ ಮರಳಿ ಮನೆಗೆ ಬರುವಾಗ ರಾಯರು ಕತೆಗಳ ಓದಿನಲ್ಲೇ ಮಗ್ನರಾಗಿರುವುದನ್ನು ನೋಡಿ ಖುಷಿಪಟ್ಟಳು. 'ಓದು ಇನ್ನೂ ಮುಗಿದಿಲ್ಲವೇ?' ಎಂದು ಪ್ರಶ್ನಿಸಿದ ಅವಳು ರಾಯರ ಪ್ರತಿಕ್ರಿಯೆಗೆ ಕಾಯದೆ, 'ಮೂರು ದಿನದ ಸಿ.ಎಲ್. ಹಾಕಿ ಬಂದಿದ್ದೇನೆ ಅಣ್ಣ. ರಾತ್ರೆ ಆಯುಷಿಗೆ ಫೋನು ಮಾಡಿ ನಾಳೆ ನಾವು ನೀನಿದ್ದಲ್ಲಿಗೆ ಬರುತ್ತೇವೆ ಎಂದೂ ಹೇಳುತ್ತೇನೆ, ಏನಂತೀರಿ?' ಎಂದಳು.

ರಾಯರು ಕತೆಯಿಂದ ಹೊರಬಂದು, 'ಹೌದು. ಆದಷ್ಟು ಶೀಘ್ರ ನಿನ್ನ ಕೆಲಸ ಆಗಬೇಕು. ನಾನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಸೀತಾಪುರಕ್ಕೆ ಹೋಗಬೇಕು' ಎಂದರು.

'ಯಾಕೆ?'

'ಅದೊಂದು ದೊಡ್ಡ ಪುರಾಣ' ಎಂದ ರಾಯರು ಎರಡು ದಿನಗಳ ಹಿಂದೆ ತಮ್ಮ ಮನೆಗೆ ಗೂಂಡಾಗಳು ನುಗ್ಗಿ ಬೆದರಿಸಿದ್ದು, ಸರೋಜಾ ನಾವು ಊರು ಬಿಟ್ಟು ಹೋಗುವುದೇ ಸರಿ ಎಂದು ಅಲವತ್ತುಕೊಂಡದ್ದು, ರಾಯರು ಪೊಲೀಸ್ ಸ್ಟೇಶನ್ನಿಗೆ ಹೋಗಿ ಕಂಪ್ಲೆಂಟ್ ಕೊಟ್ಟದ್ದು, ಸೀತಾಪುರದಿಂದ ರಾಯರು ಹೊರಡುತ್ತಿದ್ದ ಹಾಗೇ ಪೊಲೀಸ್ ಸ್ಟೇಶನ್ನಿಂದ ಈ ಪ್ರಕರಣದ ಬಗ್ಗೆ ಸಣ್ಣ ಸುಳಿವು ಸಿಕ್ಕಿದ್ದು ಎಲ್ಲವನ್ನೂ ಜಯಂತಿಗೆ ಹೇಳಿ, 'ನಾನು ಆಗಲೇ ಸದಾಶಿವ ಶೆಟ್ಟರನ್ನೂ ವಿಚಾರಿಸಬೇಕಿತ್ತು. ಅವರು ಈಗ ಸ್ಟೇಷನ್ನಿಗೆ ಹೋಗಿ ಬಂದಿರಲಿಕ್ಕೂ ಸಾಕು' ಎಂದುಕೊಳ್ಳುತ್ತಾ – 'ಜಯಂತಿ, ನೀನು ನಿನ್ನ ಕೆಲಸ ಏನಿದೆಯೋ ಅದನ್ನು ಮಾಡು. ಬಟ್, ರಾತ್ರೆಯ ಊಟ ವೆರಿ ಸಿಂಪಲ್ ಆಗಿರಬೇಕು' ಎಂದರು. 'ನಾನು ಈಗ ನಮ್ಮ ಶೆಟ್ಟರ ಜೊತೆ ಸಂಪರ್ಕ ಬೆಳೆಸಬೇಕು' ಎಂದು ಮೊಬೈಲನ್ನು ಕೈಗೆತ್ತಿಕೊಂಡರು.

ಆ ಕಡೆಯಿಂದ ಶೆಟ್ಟರು 'ಹಲೋ' ಎಂದು ಪ್ರತಿಸ್ಪಂದಿಸಿ, 'ನಾನು ಮೂರು ಬಾರಿ ನಿಮಗೆ ರಿಂಗ್ ಕೊಟ್ಟೆ ರಾಯರೇ, ನಾಟ್‌ರೀಚೆಬಲ್ ಅಂತಲೇ ಬಂತು. ನಿಮ್ಮದು ಬಿ.ಎಸ್.ಎನ್.ಎಲ್ .ಮೊಬೈಲ್ ತಾನೇ? ಅದಕ್ಕೆ ಕೆಲವು ಕಡೆ ರೇಂಜ್ ಸಿಗುವುದಿಲ್ಲ ಎಂದುಕೊಂಡು ಸುಮ್ಮನಾದೆ' ಎಂದರು.

ರಾಯರು 'ಸ್ಟೇಷನ್ನಿಗೆ ಹೋದಿರಾ ನೀವು? ವಿಷಯ ಏನಾಯಿತು?' ಎಂಬ ಕುತೂಹಲ ತೋರಿಸಿದರು.

ಶೆಟ್ಟರು 'ಸ್ಟೇಶನ್ನಿಗೆ ಹೋಗಿದ್ದೆ' ಎನ್ನುತ್ತಾ ಎಸ್.ಐ. ಅವರು ನನ್ನ ಅಣ್ಣನ ವಿಳಾಸ ಕಲೆಕ್ಟ್ ಮಾಡಿ, 'ನೀವೇನೂ ಗಾಬರಿ ಮಾಡಬೇಡಿ, ನಾನು ಪೂರ್ಣ ಮಾಹಿತಿ ಕಲೆಕ್ಟ್ ಮಾಡಿದ ಮೇಲೆ ಎಫ್.ಐ.ಆರ್. ಹಾಕುತ್ತೇನೆ' ಎಂದು ಭರವಸೆ ನೀಡಿದ್ದಾರೆ' ಎಂಬ ಮಾಹಿತಿ ನೀಡಿ, 'ರಾಯರೇ ನೀವು ಈ ವಿಚಾರವನ್ನು ರಾಂಪುರದಲ್ಲಿ ಯಾರಲ್ಲೂ ಚರ್ಚಿಸಲು ಹೋಗಬೇಡಿ. ತಪ್ಪಿಯೂ ಅಣ್ಣನ ಹೋಟೆಲಿನಾಚೆ ಮುಖ ಹಾಕಬೇಡಿ' ಎಂದರು.

ರಾಯರು 'ಸರಿ ಬಿಡಿ' ಎನ್ನುತ್ತಿದ್ದ ಹಾಗೇ ಜಯಂತಿ ಬಂದು ರಾಯರ ಇದಿರಿನ ಕುರ್ಚಿಯಲ್ಲಿ ಕುಳಿತು 'ಏನಾಯ್ತಂತೆ ನಿಮ್ಮ ಕೇಸು?' ಎಂದದ್ದಕ್ಕೆ ರಾಯರು ಶೆಟ್ಟರು ಹೇಳಿದ್ದನ್ನು ಆಕೆಗೆ ತಿಳಿಸಿ, 'ಹೇಗಿದೆ ನಮ್ಮ ಶೆಟ್ಟೀಸ್ ಹೋಟೆಲ್ ಈಗ?' ಎಂಬ ಕುತೂಹಲ ತೋರಿಸಿದರು.

ಜಯಂತಿ 'ಈಗ ಅದಕ್ಕೆ ನೀವಿದ್ದ ಕಾಲದಲ್ಲಿ ಇದ್ದ ಹೆಸರಿಲ್ಲ ಅಣ್ಣ!. ಅದರ ಮಾಲಕರಾಗಿರುವ ಸದಾನಂದ ಶೆಟ್ರಿಗೆ ಈಗ ಏನೇನೋ ದುರಾಭ್ಯಾಸಗಳು ಇವೆ ಎಂದು ನಮ್ಮ ಸ್ಟಾಫಿನವರೇ ಆಡಿಕೊಳ್ಳುವುದನ್ನು ನಾನು ಕೇಳಿದ್ದೇನೆ. ಊಟ ಉಪಾಹಾರದ ಸೆಕ್ಷನನ್ನು ಅವರು ಬೇರೆ ಯಾರಿಗೋ ಲೀಸ್‌ಗೆ ಕೊಟ್ಟಿದ್ದಾರಂತೆ. ಬರೇ ಲಾಡ್ಜಿಂಗ್ ಮಾತ್ರ